**2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ,**

**ಎಸ್.ಸಿ.ನಂಃ-157/2017**

ಪಿ.ಡಬ್ಲ್ಯೂಃ- 1

ಸಿ.ಡಬ್ಲ್ಯೂಃ- 1

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಚಾರ್ಲ್ಸ್ |
| ತಂದೆಯ ಹೆಸರುಃ | : | ವಿಲಿಯಂ |
| ವಯಸ್ಸುಃ | : | 41 ವರ್ಷ |
| ವೃತ್ತಿಃ | : | ಮೆಕ್ಯಾನಿಕ್ |
| ವಾಸಃ | : | ಬಾಗೆ ಗ್ರಾಮ, ಸಕಲೇಶಪುರ ತಾಃ. |

**ದಿನಾಂಕಃ 11-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು ಬಾಗೆ ಗ್ರಾಮದ ವಾಸಿಯಾಗಿದ್ದು ಬಾಗೆ ಗ್ರಾಮದಲ್ಲಿ ನನಗೆ ವಾಸದ ಮನೆ ಇರುತ್ತದೆ. ಈ ಪ್ರಕರಣದ 1 ರಿಂದ 7 ಆರೋಪಿಗಳು ನನಗೆ ಗೊತ್ತು. ನನಗೆ ಬಾಗೆ ಗ್ರಾಮದ ರಾಮಕೃಷ್ಣೇಗೌಡ ಉಃ ರಾಮಕೃಷ್ಣ, ಪುನೀತ, ಮನು, ರಾಕೇಶ ಸಹ ಗೊತ್ತು. ಆರೋಪಿ-1 ರಿಂದ 7 ರವರು ಹಾಗೂ ಪುನೀತ, ಮನು ಹಾಗೂ ರಾಕೇಶ ರವರು ರಾಮಕೃಷ್ಣೇಗೌಡ ಉಃ ರಾಮಕೃಷ್ಣ ರವರ ಹಿಂಬಾಲಕರು. ಚಾಸಾ-2 ವಿಲಿಯಮ್ಸ್ ನನ್ನ ತಂದೆ. ಚಾಸಾ-3 ಸಲೀನಾ ನನ್ನ ತಾಯಿ. ಚಾಸಾ-4 ಜಾರ್ಜ್ ಪತೀಸ್ ನನ್ನ ಚಿಕ್ಕಪ್ಪ. ಚಾಸಾ-5 ಮೆಲ್ವಿನ್ ನನ್ನ ಚಿಕ್ಕಪ್ಪನ ಮಗ. ಚಾಸಾ-6 ಶ್ರೀಧರ್ ಹಾಗೂ ಚಾಸಾ-7 ರವಿಕುಮಾರ ನಮ್ಮ ಊರಿನವರು. ಚಾಸಾ-8 ರಿಂದ 10 ಸಹ ನಮ್ಮ ಊರಿನವರು. ಮಾಹಿತಿ ಹಕ್ಕು ಕೇಳುವ

ವಿಚಾರದಲ್ಲಿ ಬಾಗೆ ಗ್ರಾಮ ಪಂಚಾಯಿತಿಯ ಮಾಜಿ ಅಧ್ಯಕ್ಷರಾದ ರಾಮಕೃಷ್ಣೇಗೌಡ ಹಾಗೂ ನಮ್ಮ ನಡುವೆ ಬಿನ್ನಾಭಿಪ್ರಾಯ ಇತ್ತು. ಬಾಗೆ ಗ್ರಾಮ ಪಂಚಾಯಿತಿಯಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ ನಾನು ಮಾಹಿತಿ ಹಕ್ಕಿನ ಅಡಿಯಲ್ಲಿ ಮಾಹಿತಿಯನ್ನು ಕೇಳಿದ್ದೆ. ನಾನು ಗ್ರಾಮ ಪಂಚಾಯಿತಿಯಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ ಮಾಹಿತಿಯನ್ನು ಕೇಳಿರುತ್ತೇನೆ ಎನ್ನುವ ಬಗ್ಗೆ ರಾಮಕೃಷ್ಣೇಗೌಡರು ನನ್ನ ಮೇಲೆ ದ್ವೇಷ ಸಾಧಿಸುತ್ತಿದ್ದರು.

2. ದಿಃ23.10.2015 ರಂದು ರಾತ್ರಿ ಸುಮಾರು 7.30 ಗಂಟೆ ಸಮಯದಲ್ಲಿ ಬಾಗೆ ಗ್ರಾಮದ ನಮ್ಮ ಮನೆಯ ಹತ್ತಿರ ನಾನು ಇದ್ದಾಗ ನಮ್ಮ ಊರಿನವರಾದ ರಾಮಕೃಷ್ಣೇಗೌಡ, ಉಮೇಶ, ಐತಪ್ಪ, ಶಂಕರ, ದಿವಾಕರ, ರಾಕೇಶ, ಪುನೀತ, ಆನಂದ, ಶಾಮಸುಂದರ ಮತ್ತು ಮನು ಹಾಗೂ ತಿಮ್ಮಪ್ಪ ರವರು ಗುಂಪು ಸೇರಿಕೊಂಡು ಕೈಗಳಲ್ಲಿ ಮಚ್ಚು, ದೊಣ್ಣೆಗಳನ್ನು, ಕಲ್ಲುಗಳನ್ನು ಹಿಡಿದುಕೊಂಡು ಬಂದಿರುತ್ತಾರೆ. ಈ ಕಾಲದಲ್ಲಿ ಮನೆಯಲ್ಲಿ ನನ್ನ ಜೊತೆ ಚಾಸಾ-2 ರಿಂದ 5 ರವರು ಸಹ ಇದ್ದರು. ನಾವು ಮನೆಯಲ್ಲಿ ಕುಳಿತು ಮಾತನಾಡುತ್ತಾ ಟಿ ವಿ ನೋಡುತ್ತಿದ್ದೆವು. ಮೇಲೆ ಕಾಣಿಸಿದ ಎಲ್ಲಾ ಆರೋಪಿಗಳು ನಮ್ಮ ಮನೆಗೆ ನುಗ್ಗಿ ಅಕ್ರಮ ಪ್ರವೇಶ ಮಾಡಿರುತ್ತಾರೆ. ಆರೋಪಿಗಳು ಮನೆಗೆ ಅಕ್ರಮ ಪ್ರವೇಶ ಮಾಡಿ ನನ್ನನ್ನು ಕುರಿತು ಸೂಳೆಮಗನೆ, ನಿನ್ನ ಅಮ್ಮನ್ನ ಕ್ಯಾಯ ಎಂದು ಅವಾಚ್ಯ ಶಬ್ದಗಳಿಂದ ಬೈದರು. ರಾಮಕೃಷ್ಣೇಗೌಡ ಉಃ ರಾಮಕೃಷ್ಣ ನನ್ನನ್ನು ಕೊಲೆ ಮಾಡುವ ಉದ್ದೇಶದಿಂದ ಮಚ್ಚಿನಿಂದ ನನ್ನ ತಲೆಯ ಹಿಂಭಾಗಕ್ಕೆ ಹಾಗೂ ಸೊಂಟಕ್ಕೆ ಮಚ್ಚಿನಿಂದ ಹೊಡದು ಗಾಯಪಡಿಸಿದನು. 1ನೇ ಆರೋಪಿ ಉಮೇಶ ದೊಣ್ಣೆಯಿಂದ ನನ್ನ ಕೈಕಾಲು ಹಾಗೂ ಬೆನ್ನಿಗೆ ಹೊಡೆದು ಗಾಯಪಡಿಸಿದನು. ಆರೋಪಿ ರಾಕೇಶ ಹಾಗೂ ಪುನೀತ

ರವರು ಕೈ ಕಾಲುಗಳಿಂದ ನನ್ನ ಮೈಕೈಗೆ ಹೊಡೆದರು. ಮನೆಗೆ ನುಗ್ಗಿದ್ದ ಮೇಲ್ಕಂಡ ಎಲ್ಲಾ ಆರೋಪಿಗಳು ನಮ್ಮ ಮನೆಯ ಟಿವಿ, ಕಿಟಕಿ ಗಾಜು, ಬಾಗಿಲನ್ನು ಮಚ್ಚು ಹಾಗೂ ದೊಣ್ಣೆ ಕಲ್ಲುಗಳಿಂದ ಹೊಡೆದು ಜಖಂಗೊಳಿಸಿದರು. ನಮ್ಮ ಮನೆಯ ಹೊರಗಡೆ ನಿಲ್ಲಿಸಿದ್ದ ನಮ್ಮ ಬಾಬ್ತು ಒಂದು ಮಾರುತಿ ವ್ಯಾನು ಹಾಗೂ ಮಾರುತಿ ಕಾರನ್ನು ಸಹ ಮೇಲ್ಕಂಡ ಆರೋಪಿಗಳು ಜಖಂಗೊಳಿಸಿ ನಷ್ಟಪಡಿಸಿದರು. ಆರೋಪಿಗಳ ಈ ಕೃತ್ಯದಿಂದ ನಮಗೆ ಸುಮಾರು 20 ಸಾವಿರದಷ್ಟು ನಷ್ಟ ಉಂಟಾಗಿರುತ್ತದೆ. ಜಗಳ ಬಿಡಿಸಲು ಬಂದ ನನ್ನ ತಾಯಿ ಚಾಸಾ–3 ಸಲೀನಾ ರವರಿಗೆ ರಾಮಕೃಷ್ಣೇಗೌಡ ಉಃ ರಾಮಕೃಷ್ಣ, ಉಮೇಶ, ಪುನೀತ, ಆನಂದ ರವರು ದೊಣ್ಣೆಯಿಂದ ನಮ್ಮ ತಾಯಿಯ ಮಂಡಿಗೆ ಹೊಡೆದು ಗಾಯಪಡಿಸಿದರು. ನಮ್ಮ ತಂದೆ ಚಾಸಾ–2 ವಿಲಿಯಮ್ಸ್ ಜಗಳ ಬಿಡಿಸಲು ಬಂದಾಗ 7ನೇ ಆರೋಪಿ ತಿಮ್ಮಪ್ಪ ದೊಣ್ಣೆಯಿಂದ ನಮ್ಮ ತಂದೆಯ ಬಲಗೈಗೆ ಹಾಗೂ ಬಲಭುಜಕ್ಕೆ ಹೊಡೆದು ಗಾಯಪಡಿಸಿದ. 4ನೇ ಆರೋಪಿ ಮನು ಹಾಗೂ ದಿವಾಕರ ಸಹ ನಮ್ಮ ತಂದೆಗೆ ಕೈಗಳಿಂದ ಹೊಡೆದಿರುತ್ತಾರೆ. ನನ್ನ ಚಿಕ್ಕಪ್ಪ ಚಾಸಾ–4 ಜಾರ್ಜ್ ಪಾತೀಸ್ ರವರು ಗಲಾಟೆ ಬಿಡಿಸಲು ಬಂದಿರುತ್ತಾರೆ. 3ನೇ ಆರೋಪಿ ಶಂಕರ ಒಂದು ದೊಣ್ಣೆಯಿಂದ ಅವರ ಎಡಭುಜ ಹಾಗೂ ಎಡಮುಂಗೈಗೆ ಹೊಡೆದಿರುತ್ತಾನೆ. 2ನೇ ಆರೋಪಿ ಐತಪ್ಪ ದೊಣ್ಣೆಯಿಂದ ಬಲಭುಜಕ್ಕೆ ಚಾಸಾ–4 ಜಾರ್ಜ್ ಫತೀಸ್ ಗೆ ಹೊಡೆದು ಗಾಯಪಡಿಸಿರುತ್ತಾನೆ. ಚಾಸಾ–5 ಮೆಲ್ವಿನ್ ಜಗಳ ಬಿಡಿಸಲು ಬಂದಾಗ 4ನೇ ಆರೋಪಿ ದಿವಾಕರ ಒಂದು ದೊಣ್ಣೆಯಿಂದ ಎಡಕಾಲಿನ ಕಿರುಬೆರಳಿಗೆ ಹಾಗೂ ಎಡಮುಂಗೈಗೆ ಹೊಡೆದು ಗಾಯಪಡಿಸಿರುತ್ತಾನೆ. 7ನೇ ಆರೋಪಿ ತಿಮ್ಮಪ್ಪ ಸಹ ಚಾಸಾ–5 ಮೆಲ್ವಿನ್ ಪೆತಿಯಾಸ್ ರವರಿಗೆ ಕೈ ಹಾಗೂ ದೊಣ್ಣೆಯಿಂದ ಹೊಡೆದು ಗಾಯಪಡಿಸಿರುತ್ತಾನೆ.

ಗಲಾಟೆಯನ್ನು ನಮ್ಮ ಊರಿನ ಚಾಸಾ-6 ಶ್ರೀಧರ ಹಾಗೂ ರವಿಕುಮಾರ ರವರು ನೋಡಿರುತ್ತಾರೆ.

3. ಚಾಸಾ-6 ಶ್ರೀಧರ ಹಾಗೂ ಚಾಸಾ-7 ರವಿಕುಮಾರ ರವರು ಜಗಳ ಬಿಡಿಸಲು ಪ್ರಯತ್ನಿಸಿದಾಗ ಮೇಲೆ ಕಾಣಿಸಿದ ಆರೋಪಿಗಳು ಚಾಸಾ-6 ಶ್ರೀಧರ ಹಾಗೂ ಚಾಸಾ-7 ರವಿಕುಮಾರ ರವರಿಗೆ ಏನೋ ಸೂಳೆಮಕ್ಕಳ ಯಾರ ಪರವಾಗಿ ಬಂದಿದ್ದೀರ ಎಂದು ಅವಾಚ್ಯ ಶಬ್ದಗಳಿಂದ ಬೈದರು. ಆರೋಪಿ ರಾಮಕೃಷ್ಣೇಗೌಡ ಉಃ ರಾಮಕೃಷ್ಣ ಚಾಸಾ-7 ರವಿಕುಮಾರ ರವರಿಗೆ ಮಚ್ಚಿನಿಂದ ತಲೆ ಹಾಗೂ ಎಡಕೈಗೆ ಹೊಡೆದು ಗಾಯಪಡಿಸಿರುತ್ತಾರೆ. 1ನೇ ಆರೋಪಿ ಉಮೇಶ ದೊಣ್ಣೆಯಿಂದ ಚಾಸಾ-7 ರವಿಕುಮಾರ ರವರಿಗೆ ಸೊಂಟಕ್ಕೆ ಹೊಡೆದಿರುತ್ತಾನೆ. ಚಾಸಾ-6 ಶ್ರೀಧರ್ ಗೆ ಆರೋಪಿ ರಾಮಕೃಷ್ಣೇಗೌಡ ಉಃ ರಾಮಕೃಷ್ಣ ಮಚ್ಚಿನಿಂದ ಹಣೆಯ ಬಲಭಾಗಕ್ಕೆ ಹಾಗೂ ಬಲಗಣ್ಣಿಗೆ ಹೊಡೆದು ಗಾಯಪಡಿಸಿರುತ್ತಾನೆ. 2ನೇ ಆರೋಪಿ ಐತಪ್ಪ ದೊಣ್ಣೆಯಿಂದ ಚಾಸಾ-5 ಮೆಲ್ವಿನ್ ನ ಎಡಗೈ ಹೆಬ್ಬೆರಳಿಗೆ ಹೊಡೆದು ಗಾಯಪಡಿಸಿರುತ್ತಾನೆ. ಜಗಳ ನಡೆಯುತ್ತಿದ್ದಾಗ ನಮ್ಮ ಊರಿನ ಚಾಸಾ-8 ಪುನೀತ್ ಕುಮಾರ್, ಚಾಸಾ-9 ಸುದೀಶ್ ಹಾಗೂ ಚಾಸಾ-10 ಧರೇಶ್ ರವರು ಬಂದು ಜಗಳ ಬಿಡಿಸಿರುತ್ತಾರೆ.

4. ನಮ್ಮ ಮೇಲೆ ಹಲ್ಲೆ ನಡೆಸಿದ ಮೇಲ್ಕಂಡ 11 ಜನ ಆರೋಪಿಗಳು ನಮಗೆ ಹೊಡೆಯಲು ಬಳಸಿದ ಮಚ್ಚು, ದೊಣ್ಣೆ, ಕಲ್ಲುನ್ನು ಸ್ಥಳದಲ್ಲಿ ಎಸೆದು ಮಕ್ಕಳಾ ಇವತ್ತು ಬದುಕಿಕೊಂಡಿದ್ದೀರಿ ಇನ್ನೊಂದು ದಿನ ಸಿಕ್ಕಿದರೆ ನಿಮ್ಮನ್ನು ಕೊಲೆ ಮಾಡುತ್ತೇವೆ ಎಂದು ಕೊಲೆ ಬೆದರಿಕೆ ಹಾಕಿ ಹೋದರು. ಗಾಯಗೊಂಡಿದ್ದ ನಮ್ಮನ್ನು ಒಂದು ಕಾರಿನಲ್ಲಿ ಚಾಸಾ-8 ರಿಂದ 10 ರವರು ಸಕಲೇಶಪುರ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತಾರೆ. ಸಕಲೇಶಪುರ ಸರ್ಕಾರಿ

ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದ ನನ್ನನ್ನು ನಮ್ಮ ತಾಯಿ ಚಾಸಾ-3 ಸಲೀನಾ, ಚಾಸಾ-6 ಶ್ರೀಧರ ನಮ್ಮ ತಂದೆ ಚಾಸಾ-2 ವಿಲಿಯಮ್ಸ್‌ರವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಆಂಬುಲೆನ್ಸಿನಲ್ಲಿ ಹಾಸನದ ಸರ್ಕಾರಿ ಆಸ್ಪತ್ರಗೆ ಕಳುಹಿಸಲಾಗಿರುತ್ತದೆ. ದಿಃ24.10.2015ರ ಬೆಳಗಿನ ಜಾವ 1.30 ಗಂಟೆ ಸಮಯಕ್ಕೆ ಪೊಲೀಸರು ಹಾಸನದ ಸರ್ಕಾರಿ ಆಸ್ಪತ್ರೆಗೆ ಬಂದು ನನ್ನ ದೂರನ್ನು ಪಡೆದುಕೊಂಡರು. ಸಾಕ್ಷಿದಾರರು ಗುರುತಿಸಿದ ಅವರ ದೂರನ್ನು ನಿಪಿ-1 ಎಂದು, ನಿಪಿ-1 ರಲ್ಲಿ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಪೊಲೀಸರು ನಿಪಿ-1 ಹೇಳಿಕೆಯನ್ನು ಪಡೆದುಕೊಂಡ ನಂತರ ಅದನ್ನು ನನಗೆ ಓದಿ ಹೇಳಿರುತ್ತಾರೆ. ಹಾಸನದ ಸರ್ಕಾರಿ ಆಸ್ಪತ್ರೆಯಿಂದ ಹೆಚ್ಚಿನ ಚಿಕಿತ್ಸೆಗಾಗಿ ನಾನು ಹಾಗೂ ಚಾಸಾ-6 ಶ್ರೀಧರ ರವರು ಹಾಸನದ ಸಿಎಸ್ಐ ಮಿಷನ್ ಆಸ್ಪತ್ರೆಗೆ ಹೋಗಿರುತ್ತೇವೆ. ನಮ್ಮ ಮನೆಯಲ್ಲಿ ವಿದ್ಯುತ್ ಬೆಳಕು ಇತ್ತು ಹಾಗೂ ಮನೆಯ ಹೊರಗಡೆ ಬೀದಿ ದೀಪ ಸಹ ಇತ್ತು ಈ ಬೆಳಕಿನಲ್ಲಿ ನಾವು ಸಂಪೂರ್ಣ ಘಟನೆಯನ್ನು ನೋಡಿರುತ್ತೇವೆ.

5. ಆರೋಪಿಗಳು ನನಗೆ ಹಾಗೂ ಚಾಸಾ-2 ರಿಂದ 7 ರವರಿಗೆ ಕೊಲೆ ಮಾಡುವ ಉದ್ದೇಶದಿಂದ ನಮ್ಮ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿರುತ್ತಾರೆ. ನಾನು ಪಂಚಾಯಿತಿಯಲ್ಲಿ ಮಾಹಿತಿ ಹಕ್ಕು ಅಡಿಯಲ್ಲಿ ಅರ್ಜಿ ಸಲ್ಲಿಸಿದ ವಿಚಾರಕ್ಕೆ ಸಂಬಂಧಿಸಿದಂತೆ ನಮ್ಮ ಮೇಲೆ ಈ ಹಲ್ಲೆ ಆಗಿರುತ್ತದೆ. ಆರೋಪಿಗಳು ನಮಗೆ ಹಲ್ಲೆ ನಡೆಸಲು ಬಳಸಿದ ಮಚ್ಚು, ಕಲ್ಲು ಹಾಗೂ ದೊಣ್ಣೆಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿದಾರರು ನ್ಯಾಯಾಲಯದ ಮುಂದೆ ಗುರುತಿಸಿದ ಒಂದು ಮಚ್ಚನ್ನು ಮುಮಾ-1 ಎಂದು ಗುರುತಿಸಲಾಯಿತು. ಸಾಕ್ಷಿದಾರರು ಗುರುತಿಸಿದ 3 ಕಾಡು ಜಾತಿಯ ದೊಣ್ಣೆಗಳನ್ನು ಒಟ್ಟಾಗಿ ಮುಮಾ-2 ಎಂದು ಗುರುತಿಸಲಾಯಿತು. ಸಾಕ್ಷಿದಾರರು ಗುರುತಿಸಿದ 2

ಹಿಡಿಗಾತ್ರದ ಕಲ್ಲುಗಳನ್ನು ಒಟ್ಟಾಗಿ ಮುಮಾ-3 ಎಂದು ಗುರುತಿಸಲಾಯಿತು. ಸಾಕ್ಷಿದಾರರು ಗುರುತಿಸಿದ ಕಿಟಕಿಯ ಒಡೆದ ಗಾಜಿನ ಚೂರುಗಳನ್ನು ಒಟ್ಟಾಗಿ ಮುಮಾ-4 ಎಂದು ಗುರುತಿಸಲಾಯಿತು. ಸಾಕ್ಷಿದಾರರು ಗುರುತಿಸಿದ ಕಾರಿನ ಗಾಜಿನ ಒಡೆದ ಚೂರುಗಳನ್ನು ಒಟ್ಟಾಗಿ ಮುಮಾ-5 ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಆರೋಪಿತರ ಪರ ವಕೀಲರಿಂದ:**

ಆರೋಪಿಗಳ ಪರ ವಕೀಲರ ಕೋರಿಕೆಯ ಮೇರೆಗೆ ಪಾಟಿ ಸವಾಲನ್ನು ಮುಂದೂಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.